ಮೂಲ ದಾವಾ ನಂ. 87/2018

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 18-11-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಮ್. ಎಸ್. ಬಿ. ವಕೀಲರಿಂದಃ**

ನಾಗಪ್ಪ 1 ರಿಂದ 4 ನೇ ಪ್ರತಿವಾದಿಯರ ತಂದೆಯಾದ ನಾರಾಯಣ ಮಂಜಪ್ಪ ಕೊಡಿಯಾರವರಿಗೆ ದಿಃ 02.01.1963 ರ ನೊಂದಣಿ ದಾನ ಪತ್ರದ ಮೂಲಕ ದಾವಾ ಆಸ್ತಿಯಲ್ಲಿರುವ ತನ್ನ ಹೆಸರನಲ್ಲಿರುವ ಮಾಲ್ಕಿ ಆಸ್ತಿಗಳನ್ನು ದಾನವಾಗಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಮ್ಮ ಕುಟುಂಬಕ್ಕೆ ಮಾಹಿತಿ ಇರುವುದಿಲ್ಲ. ಆ ರೀತಿ ಆದ ವಿಚಾರ ದಾಖಲೆ ನೋಡಿದಾಗ 2018 ನೇ ಇಸವಿಯಲ್ಲಿ ನಮಗೆ ಗೊತ್ತಾಗಿರುತ್ತದೆ. ನಾನು ಸದ್ರಿ ದಾನಪತ್ರವನ್ನು ಓದಿ ನೋಡಿರುತ್ತೇನೆ. ಆ ರೀತಿ ದಾನಪತ್ರವನ್ನು ದಾವಾದ ಎಲ್ಲಾ ಆಸ್ತಿಗಳ ಕುರಿತಾಗಿ ಮಾಡಲಾಗಿತ್ತು. ಮಾಲ್ಕಿ ಹಕ್ಕಿನ ಕುರಿತು ದಾನಪತ್ರ ಮಾಡಿದ್ದು ರೈತನಾತೆಯಿಂದ ಮಂಜೂರಾದ ಆಸ್ತಿಗಳ ಕುರಿತು ನಾಗಪ್ಪ ಎನ್ನುವವರು 1 ರಿಂದ 4 ನೇ ಪ್ರತಿವಾದಿಯರ ತಂದೆಯಾದ ನಾರಾಯಣ ಮಂಜಪ್ಪ ಕೊಡಿಯಾ ರವರ ಪರವಾಗಿ ದಿಃ 22.04.1963 ರಂದು ನೊಂದಾಯಿತ ವಿಲ್ ನಾಮೆ ಮಾಡಿದ್ದರು ಎಂದರೆ ಆ ಬಗ್ಗೆ ನನಗೆ 2018 ನೇ ಇಸವಿಯಲ್ಲಿ ದಾಖಲೆ ನೋಡಿದಾಗ ಗೊತ್ತಾಯಿತು ಎಂದು ನುಡಿಯುತ್ತಾರೆ. ನಾನು ಆ ಬಗ್ಗೆ ರೆಕಾರ್ಡ ಉತ್ತಾರ ಮತ್ತು ಮ್ಯುಟೇಷನ್ ಎಂಟ್ರಿ ತೆಗೆದು ನೋಡಿರುತ್ತೇನೆ. ವಿಲ್‌ನಾಮೆ ಮತ್ತು ದಾನಪತ್ರದ ಪ್ರಕಾರವೇ ನಾರಾಯಣ ಮಂಜಪ್ಪ ಕೊಡಿಯಾರವರ ಹೆಸರು ರೆಕಾರ್ಡ ಉತ್ತಾರದಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ವಿಲ್ ನಾಮೆಯನ್ನು ನಾನು ನೋಡಿರುತ್ತೇನೆ, ಆದರೆ ಅದನ್ನು ಓದಲು ಆಗಿರುವುದಿಲ್ಲ. ಆ ರೀತಿ ಮಾಹಿತಿ ಗೊತ್ತಾದ ಮೇಲೂ ಸಹಾ ಸದ್ರಿ ಎಂಟ್ರಿ ತಪ್ಪು ಎಂದು ಕಾನೂನು ಕ್ರಮ ಕೈಗೊಂಡರಾ ಎಂದರೆ ಸಾಕ್ಷಿ ಆ ಬಗ್ಗೆ ವಕೀಲರಿಗೆ ಮಾಹಿತಿ ಕೊಟ್ಟಿದ್ದು ಅವರು ಕ್ರಮ ಕೈಗೊಂಡರಾ ಇಲ್ಲವಾ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾಗಪ್ಪ ಸದ್ರಿ ವಿಲ್‌ನಾಮೆ ಮಾಡುವಾಗ ಅದರಲ್ಲಿ ಮಾಲ್ಕಿ ಹಕ್ಕಿನ ಆಸ್ತಿಗಳನ್ನು ದಾನ ಮಾಡಿದ ಬಗ್ಗೆ ಬರೆಯಲಾಗಿತ್ತು ಎಂದರೆ ಸಾಕ್ಷಿ ಅದನ್ನು ವಕೀಲರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿ ವರ್ಷ ಉತಾರಗಳನ್ನು ತೆಗೆದು ನೋಡುವ ಪದ್ಧತಿ ಇರುವುದಿಲ್ಲ. ಸದ್ರಿ ಜಾಗ ಸಾಮಾಯಿಕವಾದ ಕಾರಣ ನಾನು 1963 ರಿಂದ ಯಾವದೇ ದಾಖಲೆ ತೆಗೆದು ನೋಡಿದ್ದು ಇರವುದಿಲ್ಲ.

ನಾಗಪ್ಪ ನನಗೆ ಅಜ್ಜನಾಗಬೇಕು. ಅವರು ನಾನು ಹುಟ್ಟುವ ಪೂರ್ವದಲ್ಲಿಯೇ ತೀರಿಕೊಂಡಿರುತ್ತಾರೆ. ಅವರು ಪಾರ್ಶ್ವವಾಯುವಾಗಿ ಅನಾರೋಗ್ಯದಿಂದ ತೀರಿಕೊಂಡಿರುತ್ತಾರೆ. ಆ ಮಾಹಿತಿಯನ್ನು ನನಗೆ ನನ್ನ ತಾಯಿ ನೀಡಿರುತ್ತಾರೆ. ಆ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯ ಮದುವೆ ಸಮಯದಲ್ಲಿಯೇ ನನ್ನ ಅಜ್ಜನಿಗೆ ವ್ಯಕ್ತಿಗಳನ್ನು ಗುರುತಿಸುವ ಶಕ್ತಿ ಕುಂಠಿತವಾಗಿತ್ತು ಎಂದು ನನ್ನ ತಾಯಿ ನನಗೆ ಹೇಳಿದ್ದರು. ಈ ಎಲ್ಲಾ ವಿಚಾರ ನನಗೆ 2018 ರಲ್ಲಿ ಗೊತ್ತಾಯಿತು. ಆ ಬಗ್ಗೆ ದಾಖಲಾತಿಯನ್ನು ತೆಗೆದು ನೋಡಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ಅನಿವಾರ್ಯತೆ ಇರಲಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರಬಹುದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾದ ಕಾರಣ ನನ್ನ ಅಜ್ಜ ನಾಗಪ್ಪನಿಗೆ ದಾನಪತ್ರ ಮತ್ತು ವಿಲ್ ನಾಮೆ ಮೂಲಕ ಆಸ್ತಿ ಕೊಡುವ ಹಕ್ಕು ಇಲ್ಲ ಎಂದು ಹೇಳುತ್ತಿದ್ದೇನೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ನೀಡಿರುತ್ತೇನೆ.

ದಾವಾ ಆಸ್ತಿಗಳ ಕುರಿತು 1 ರಿಂದ 4 ನೇ ಪ್ರತಿವಾದಿಯರ ತಂದೆ ಅಧಿಭೋಗ ಹಕ್ಕನ್ನು ಕೋರಿ ನಮೂನೆ 7 ನ್ನು ಸಲ್ಲಿಸಿದ್ದರು ಎಂದರೆ ನನಗೆ 2018 ರಲ್ಲಿ ಗೊತ್ತಾಯಿತು ಎಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ತಾಯಿಗೂ ಕೂಡಾ ಯಾವದೇ ಮಾಹಿತಿ ಇರಲಿಲ್ಲ. ಆ ನಂತರ ಭೂನ್ಯಾಯ ಮಂಡಳಿಯ ಆದೇಶ ಸರಿ ಇಲ್ಲ ಎಂದು ಕಾನೂನು ಕ್ರಮ

ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ನಾನು ವಕೀಲರಿಗೆ ದಾಖಲೆ ಕೊಟ್ಟಿರುತ್ತೇನೆ, ಉಳಿದ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾನ ಪತ್ರದಲ್ಲಿ ಮತ್ತು ವಿಲ್ನಾಮೆಯಲ್ಲಿ ನಾಗಪ್ಪ ಸದ್ರಿ ಆಸ್ತಿಯನ್ನು ಕುಟುಂಬದ ನಾತೆಯಿಂದ ಕೊಡುತ್ತಿದ್ದಾನೆ ಎಂದು ಬರೆದಿದ್ದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಭೂನ್ಯಾಯ ಮಂಡಳಿಯಲ್ಲಿ ನಾರಾಯಣ ಕೊಡಿಯಾರವರು ಸ್ವತಂತ್ರವಾಗಿ ಅಧಿಭೋಗದ ಹಕ್ಕನ್ನು ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.